ದಿನಾಂಕಃ 19/10/2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಮುಂ. ಮುಖ್ಯ ವಿಚಾರಣೆಃ ಸಸಅ ರವರಿಂದಃ

3. ಶಿವಪ್ಪ ಮಹಾದೇವಪ್ಪ ಮತ್ತು ಅವರ ಸಹೋದರಿ ಸುರೇಶ ಅವರು ಆರೋಪಿಯೊಂದಿಗೆ ಮೀಲಾಪೆಯಾಗಿ ಬ್ಯಾಂಕಿನಲ್ಲಿ ಬೆಳೆ ಸಾಲ ಮತ್ತು ವ್ಯಾಪಾರ ಸಾಲ ಪಡೆದಿದ್ದರು. ನಾವು ಲೆಕ್ಕ ಪರೀಶೀಲನೆ ಮಾಡಿದಾಗ ಸದರಿಯವರು ರಾಜಿ ಮಾಡಿಕೊಂಡು ಬಾ್ಯಂಕಿನ ಅಸಲು ಮತ್ತು ಬಡ್ಡಿ ಹಣವನ್ನು ಕಟ್ಟಿರುತ್ತಾರೆ. ಈ ಬಗ್ಗೆ ಸದರಿಯವರು ಪ್ರಮಾಣ ಪತ್ರವನ್ನು ಬರೆದುಕೊಟ್ಟಿರುತ್ತಾರೆ.

4. ಮಂಜವ್ವ ಯಲವಾಳ ಎಂಬುವವರು ಬ್ಯಾಂಕಿನಿಂದ ರೂ. 1,60,000/ ಹಣವನ್ನು ಬೆಳೆ ಸಾಲವಾಗಿ ಪಡೆದುಕೊಂಡಿದ್ದರು. ಅರ್ಜಿಯನ್ನು ಪರೀಶೀಲಿಸಿದಾಗ ರೂ. 1,80,000/ ಇತ್ತು. ಹೆಚ್ಚಿನ ರೂ. 20,000 ಹಣವನ್ನು ಆರೋಪಿ ಬಳಸಿಕೊಂಡಿದ್ದ.

5. ಚನ್ನಬಸಪ್ಪ ಮದುಗುಣಕಿ ಎಂಬುವವರು ಬೆಳೆ ಸಾಲದ ಅಸಲು ಮತ್ತು ಬಡ್ಡಿ ನವೀಕರಣಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ ಸದರಿ ಅರ್ಜಿಯನ್ನು ನವೀಕರಣ ಮಾಡದೇ ಆರೋಪಿ ತನ್ನ ಬಳಿ ಇಟ್ಟುಕೊಂಡಿದ್ದ. ಈ ಬಗ್ಗೆ ಸದರಿಯವರು ತಕರಾರು ನೀಡಿದ್ದರು.

6. ಶಿವಪ್ಪ ಬಸಪ್ಪ ಬಿಸಿರೊಟ್ಟಿ ಎಂಬುವವರು ಅಕ್ಷಯ ಕ್ಯಾಶ್ ಸರ್ಟಿಫೀಕೇಟ್ ಡೆಪಾಸಿಟ್ ಠೇವು ಇಟ್ಟಿದ್ದು ಸದರಿ ಖಾತೆ ಸಿ ಬಿ ಎಸ್ ( ಕೋರ್ ಬ್ಯಾಂಕಿಂಗ್ ಸಿಸ್ಟಮ್ ) ಚಾಲ್ತಿಯಲ್ಲಿರುತ್ತವೆ. ಸದರಿ ಖಾತೆಯನ್ನು ಬ್ಯಾಂಕಿನ ಬಿ ಜಿ ಎಲ್ ಮೆಚ್ಯೂರ್ಡ್ ಖಾತೆಗೆ ಸರ್ಟಿಫೀಕೇಟನಲ್ಲಿದ್ದ ಮೊತ್ತವನ್ನು ಖರ್ಚು ಹಾಕಿ ನವಿಕರಿಸಲಾಗಿತ್ತು. ಆದರೆ ಸದರಿ ಖಾತೆಯನ್ನು ಆರೋಪಿ ಹೊಂದಾಣಿಕೆ ಮಾಡಿರುವುದಿಲ್ಲ. ಚಾಲ್ತಿಯಲ್ಲಿ ಇಟ್ಟಿರುತ್ತಾರೆ ನಂತರ ಮೂರು ಸರ್ಟಿಫೀಕೇಟ್ ಗಳನ್ನು ಕಳೆದುಕೊಂಡ ಬಗ್ಗೆ ನಕಲು ಸರ್ಟೀಫಿಕೇಟ್ ಪೂರೈಸಲು ಅರ್ಜಿ ಕೊಟ್ಟಾಗ ಆಗ ಕರ್ತವ್ಯದಲ್ಲಿ ಇದ್ದ ಬ್ರಾಂಚ್ ಮ್ಯಾನೇಜರ್ ಪಿ ಕೆ ಖಾನಾಪೂರ ಎಂಬುವವರು ಕೇಂದ್ರ ಕಚೇರಿಯ ಅದೇಶದಂತೆ ಮೂರು ನಕಲು ಸರ್ಟೀಫಿಕೇಟ್ ಗಳನ್ನು ಕೊಟ್ಟಿರುತ್ತಾರೆ. ಹೀಗೆ ಎರಡು ಸಾರಿ ಎ ಸಿ ಸಿ ಸರ್ಟೀಫಿಕೇಟ್ ಖರ್ಚು ಹಾಕಲಾಗಿದೆ ಎಂದು ನನ್ನ ತನಿಖಾ ವರದಿಯಲ್ಲಿ ನಮೂದಿಸಿಸಲಾಗಿದೆ. ವಿಚಾರಣೆ ಸಮಯದಲ್ಲಿ ಆರೋಪಿ ತನ್ನ ತಪ್ಪನ್ನು ಒಪ್ಪಿಕೊಂಡು ಹಣವನ್ನು ಜಮಾ ಮಾಡಿರುತ್ತಾನೆ.

(ಈ ಹಂತದಲ್ಲಿ ಸಾಕ್ಷಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ 19-10-2023 ರಂದು ಬೆಳಿಗ್ಗೆ 11ಃ58 ರಿಂದ 12ಃ14 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ